ಇದೆ, ಈ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ತಾವು ಎಲ್ಲ ಪ್ರದೇಶಗಳಿಗೆ, ದೊಡ್ಡ ಕೆರೆ ಗಳಿರುವ ಜಾಗಕ್ಕೆ ಭೇಟಿಕೊಟ್ಟು ಎಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ಅಂತಹ ಕಡೆಗಳಲ್ಲಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇವೆ. ನಾನು ಎಸ್ಟಿಮೇಟ್ ಕಮಿಟಿ ಮೆಂಬರ್ ಇದ್ದಾಗ ಚುರುಕಿನಾಳ ಪ್ರದೇಶಕ್ಕೆ ಭೇಟಿ ಕೊಟ್ಟಿದಾಗ ಅಲ್ಲಿ ಬಹಳಷ್ಟು ಕಟ್ಟಡಗಳು ತೀರಾ ಕೆಳಮಟ್ಟದಲ್ಲಿದ್ದವು. ಇಲ್ಲಿಯವರೆಗೂ ಯಾವುದೇ ಕ್ರಮ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಇಂತಹ ಹಲವಾರು ವಿಚಾರಗಳು ತಮ್ಮ ಗಮನಕ್ಕೆ ಬಂದಿರಬಹುದು. ಆದ್ದರಿಂದ...

ಚೇರ್ಮನ್.—ಸ್ವಲ್ಪ ತಡೆಯಿರಿ. ಈಗ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಡುತ್ತಾರೆ.

ಮುಖ್ಯಮಂತ್ರಿಯವರಿಂದ ಹೇಳಿಕೆ

ಸರ್ಕಾರಿ ನೌಕರರ ತುಟ್ಟಿಭತ್ಯೆ ಹೆಚ್ಚಳದ ಬಗ್ಗೆ

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರಿಗೆ ನಾನು ಧನ್ಯವಾದ ಗಳನ್ನು ಅರ್ಪಿಸುತ್ತೇನೆ. ಮಾನ್ಯ ಸದಸ್ಯರು ಇಪತ್ತಿನ ಬೇಡಿಕೆಗಳ ಬಗ್ಗೆ ಮಾತನಾಡುತ್ತಿದ್ದರು. ಮಂಧ್ಯದಲ್ಲೇ ಅಪರ ಭಾಷಣಕ್ಕೆ ತಡೆ ಉಂಟು ಮಾಡಬೇಕಾದ ಪರಿಸ್ಥಿತಿ ಬಂತು. ಆದಕ್ಕೆ ಕಾರಣ ಇಷ್ಟೆ, ನಾನು ಒಂದು ಮಹತ್ವದ ಸ್ಟೇಟ್‌ಮೆಂಟ್‌ನ್ನು ಮಾಡಬೇಕಾಗಿದೆ. ಮತ್ತು ಸನ್ನ ರೋಗ್ಯ ಅಷ್ಟೊಂದು ಸರಿಯಿಲ್ಲದ್ದಕ್ಕಾಗಿ ನಾನು ಸ್ಟೇಟ್‌ಮೆಂಟ್ ಮಾಡಿ ತಿರುಗಿ ಹೋಗಿ ನಾನು ಸಾಕಷ್ಟು ವಿಶ್ರಾಂತಿ ಪಡೆಯಬೇಕಾಗಿದೆ. ಆದಕ್ಕೆ ತಮ್ಮ ಅನುಮತಿಯನ್ನು ಕೇಳಿದ್ದೇನೆ. ಮಾನ್ಯ ಸಭಾಧ್ಯಕ್ಷರೇ ಅವಸರದಲ್ಲಿ ಇಂಗ್ಲೀಷನಲ್ಲಿ ಈ ಸ್ಟೇಟ್‌ಮೆಂಟ್ ತಯಾರಾಗಿದೆ. ಬಹುಶ; ಇನ್ನೂ ಸ್ವಲ್ಪ ಹೊತ್ತಿನಲ್ಲಿ ಇದರ ಎಲ್ಲಾ ಪ್ರತಿಗಳು ಕೂಡ, ಇಂಗ್ಲೀಷ್ ಮತ್ತು ಕನ್ನಡದಲ್ಲಿ ಕೂಡ ಸಾಧ್ಯವಾದರೆ ಇವತ್ತೇ ಎಲ್ಲ ಮಾನ್ಯ ಸದಸ್ಯರುಗಳಿಗೆ ಕಳಿಸುವುದಕ್ಕೆ ಮತ್ತು ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

Dearness Allowance is an allowance paid to compensate the Government employees for the erosion in the real value of the salaries owing to the increase in prices. This allowance which came to be paid in the wake of the II world was has been continued to be paid for over four decades. The Pay Commissions appointed by the State Government as well as Central Government have recognised the relevance and the need to pay this allowance.

2. Dearness Allowance paid to the Government employees is regulated with reference to the all India Average Consumer Price Index Number, the base year being 1960. It is paid for the price increases above the twelve monthly average twice a year. Government servants drawing basic pay upto Rs. 3,500 per month are allowed 100 percent neutralisation agains the price increase. Those drawing basic pay between Rs. 3,501 to Rs. 6,000 per month are allowed 75 percent neutralisation and those drawing basic pay of Rs. 6,001 and above per month are allowed neutralisation upto 65 percent only.

3. The consumer price index number stood at 842 points at the end of December 1989 moving from 817 points in July 1989. Thus, the index has registered an increase of 25 points between 1-7-1989 to 31-12-89. Accordingly, as per the formula in force, our employees drawing pasic pay upto Rs. 3,500 per month become entitled for an increase of 4 percent in their basic pay. Those drawing a basic pay of Rs. 3,501 to Rs, 6,000 per month become entitled for a D. A. increase of 3 percent and those drawing a basic pay of Rs. 6,001 per month and above for an increase of 2 percent.

4. Hon'ble Members would like to know that the total expenditure on salaries, pensions grant-in-aid comes to Rs. 1,982 crores for the year 1990-91, as against the revenue receipts of Rs. 3,815 crores and revenue expenditure of Rs. 4.010 crores constituting 51.95 percent of the revenues and 49.44 percent of the expenditure respectively. These figures clearly indicate how a substantial percentage of Government income is appropriated by way of payment of salaries to Government employees, leaving that much less for developmental expenditure.

5. Inspite of the difficult financial position that the State is experiencing and the inability of the State Government to invest in developmental effort in an adequate measure, Government are pleased to sanction Dearness allowance to the State Government employees at the retes mentioned above with effect from 1-1-1990. The dearness/arrears of allowance payable from this date will be invested in National Savings Certificates.

6. As a result of this measure our employees get a minimum benefit of Rs. 31 per month and a maximum of Rs. 180 per month. As a result, the State Government will be incurring additional expenditure of Rs. 50 crores per year.

ವಿತ್ತೀಯ ಕಾರ್ಯಕಲಾಪಗಳು

1990-91ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ (ಮುಂದುವರಿದುದು)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ —ಇನ್ನು ಪಿ.ಡಬ್ಲ್ಯೂ.ಡಿ ಮತ್ತು ನೀರಾವರಿ ಇಲಾಖೆ ವತಿಯಿಂದ ರಸ್ತೆ ಮತ್ತು ಕಟ್ಟಡಗಳನ್ನು ಕಟ್ಟುವಂಥ ಕಾರ್ಯಕ್ರಮ ಏನಿದೆ, ಇದು ಸಮರ್ಪಕವಾಗಿಲ್ಲ. ಉತ್ತಮ ಗುಣಮಟ್ಟ ಇಲ್ಲ. ಕಾರಣ ಇಷ್ಟೆ, ಈ ಸಂದರ್ಭದಲ್ಲಿ ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಉತ್ತಮವಾದ ಕಟ್ಟಡಗಳನ್ನು ಕಟ್ಟುವುದಕ್ಕೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈ ಹಿಂದೆ ಯಾವ ರೀತಿ ಕೊಟ್ಟಿದ್ದಾರೋ, ಅದೇ ಪ್ರಕಾರ ಕಟ್ಟಡಗಳ ನಿರ್ಮಾಣ ಕಾರ್ಯ ಆಗಬೇಕು. ಸರ್ಕಾರದವರು ಕೊಟ್ಟಂಥ ಹಣವನ್ನು ಸಮರ್ಪಕವಾದ ಒಂದು ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕು ಹಾಗೂ ಮಾದರಿ ಕಟ್ಟಡಗಳನ್ನು ನಿರ್ಮಾಣ ಮಾಡುವುದಕ್ಕೆ ಹೆಚ್ಚಿನ ಉಪಯೋಗ ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಜಿಲ್ಲಾ ಪಂಟ್ಟದ ರಸ್ತೆಗಳು, ತಾಲ್ಲೂಕು ಪಂಟ್ಟದ ರಸ್ತೆಗಳು ಮಂಡಲ್ ಪಂಚಾಯ್ತಿ ರಸ್ತೆಗಳು. ಹೀಗೆ ಪ್ರಮುಖವಾದ ರಸ್ತೆಗಳೇನಿದೆ, ಈ ರಸ್ತೆಗಳೆಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕಾಗುತ್ತಿಲ್ಲ. ನಮ್ಮ ಭಾಗ ವಿಶೇಷವಾಗಿ ಹಿಂದುಳಿದ ಭಾಗ, ಗುಡ್ಡಗಾಡು ಪ್ರದೇಶ. ಇಲ್ಲಿಯ ಜನಗಳು ಸರಿಯಾದ ರಸ್ತೆಗಳನ್ನು ಕಾಣುತ್ತಾ ಇಲ್ಲ. ಮುಖ್ಯವಾಗಿ ಈ ರಸ್ತೆಗಳಿಗೆ ಟಾರ್ ಇಲ್ಲ, ಜಲ್ಲಿ ಹಾಕಿಸಿ. ಈ ಕಾರಣದಿಂದ ಅಲ್ಲಿಯ ಜನಗಳು ಜಿಲ್ಲಾಪಂಟ್ಟದ ಕಾರ್ಯಕ್ರಮಗಳಿಗೆ, ತಾಲ್ಲೂಕು ಪಂಟ್ಟದ ಕಾರ್ಯಕ್ರಮಗಳಿಗೆ ಹೋಗಿಬರುವುದಕ್ಕೆ ಸಮರ್ಪಕವಾದ ರಸ್ತೆಗಳು ಇಲ್ಲ. ಆದ್ದರಿಂದ ಮಾನ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಈ ವರ್ಷದಲ್ಲಿ ಹೆಚ್ಚಿನ ಹಣ ಬಿಡುಗಡೆ ಮಾಡಬೇಕು ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ವತಿಯಿಂದ ನಮ್ಮ ಭಾಗದಲ್ಲಿರತಕ್ಕ ಎಷ್ಟು ರಸ್ತೆಗಳು ಪೂರ್ತಿಯಾಗಿಲ್ಲ. ಆ ರಸ್ತೆಗಳನ್ನು ಹೆಚ್ಚಿನ ಹಣ ವಿನಿಯೋಗ ಮಾಡಿಕೊಂಡು, ಬೀದರ್ ದಾಯಚೂರು ಈ ಭಾಗಗಳ ಪ್ರಮುಖ ರಸ್ತೆಗಳಲ್ಲಿ ಟಾರ್ ಹಾಕುವಂಥ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಹೀಗೆ ಹಲವಾರು ವಿಚಾರಗಳನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ನೀರಾವರಿ ಇಲಾಖೆಯಲ್ಲಿ ಇರತಕ್ಕಂಥ ಉತ್ತಮ ಎಂಜಿನಿಯರ್‌ಗಳನ್ನು ಗುರುತಿಸತಕ್ಕಂಥ ಕೆಲಸ ಇಂದು ಆಗಬೇಕಾಗಿದೆ. ಈ ರೀತಿ ನೀರಾವರಿ